(6)ಸಹಕಾರ ಸಂಘ/ಸಹಕಾರ ಬ್ಯಾಂಕಿನೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಪ್ರದೇಶದ ಸ್ತ್ರೀ ಶಕ್ತಿ ಗುಂಪು/ಸ್ವಸಹಾಯ ಗುಂಪಿನ ಸದಸ್ಯರಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

ಇನ್ನು ಮುಂದೆ ಕೂಡ ಈ ಯೋಜನೆಯ ಫಲಾನುಭವಿಗಳನ್ನು ಹೆಚ್ಚಿಸಿ ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ಅವಕಾಶ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದು.

754 (1208) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :- ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

(ಅ) ರಾಜ್ಯದಾದ್ಯಂತ ಇರುವ ಹಾಪ್‌ಕಾಮ್ಸ್ ಮಳಿಗೆಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಮಳಿಗೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; ಸದರಿ ನೌಕರರಲ್ಲಿ ಖಾಯಂ ಹಾಗೂ ಹಂಗಾಮಿಯಾಗಿ ಇರುವ ನೌಕರರೆಷ್ಟು ; (ವಿವರ ನೀಡುವುದು)

(ಇ) ಹಂಗಾಮಿ ನೌಕರರುಗಳ ಪೈಕಿ ಯಾವ ಯಾವ ದರ್ಜೆಯ ನೌಕರರು ಎಷ್ಟೆಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ; (ವಿವರ ನೀಡುವುದು)

(ಈ) ಹಂಗಾಮಿ ನೌಕರರುಗಳನ್ನು ಖಾಯಂಗೊಳಿಸಲಾಗುವುದೇ ?

ಶ್ರೀ ಶಶಿಕಾಂತ ಅ. ನಾಯಕ (ತೋಟಗಾರಿಕೆ ಸಚಿವರು) :-

(ಅ) ರಾಜ್ಯದಲ್ಲಿ ಒಟ್ಟು 502 ಹಾಪ್‌ಕಾಮ್ಸ್ ಮಳಿಗೆಗಳಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

(ಆ) ಒಟ್ಟು 739 ನೌಕರರು ಇದ್ದು, ಖಾಯಂ ನೌಕರರು 566, ಹಂಗಾಮಿ ನೌಕರರು 173 ಇರುತ್ತಾರೆ, ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

(ಇ) ವಿವರವಾದ ಮಾಹಿತಿಯನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

(ಈ) ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳು, 1960 ರ ನಿಯಮ 17 (1) ರನ್ವಯ ಆಯಾ ಸಹಕಾರಿ ಸಂಘಗಳು ಕ್ರಮ ಕೈಗೊಳ್ಳಲಾಗುತ್ತವೆ.

755 (1209) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :- ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

(ಅ) ರಾಜ್ಯದಾದ್ಯಂತ "ರಾಷ್ಟ್ರೀಯ ತೋಟಗಾರಿಕೆ ಮಿಷನ್" ಎಲ್ಲೆಲ್ಲಿ

ಅನುಬಂಧ–1

ರಾಜ್ಯದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಜಿಲ್ಲಾವಾರು ವಿವರಗಳು

ಕ್ರ. ಸಂ.	ಜಿಲ್ಲಾ ಹಾಪ್‌ಕಾಮ್ಸ್	ಮಳಿಗೆಗಳ ಸಂಖ್ಯೆ	ನೌಕರರ ಸಂಖ್ಯೆ		
			ಖಾಯಂ	ಹಂಗಾಮಿ	ಒಟ್ಟು
1	ಬೆಂಗಳೂರು ಹಾಪ್‌ಕಾಮ್ಸ್	272	419	2	421
2	ಬೆಂಗಳೂರು (ಗ್ರಾ)	13	–	–	–
3	ಮಡಿಕೇರಿ	1	0	2	2
4	ಮಂಡ್ಯ	25	10	57	57
5	ದಕ್ಷಿಣ ಕನ್ನಡ	17	19	5	24
6	ಹಾಸನ	6	9	9	18
7	ಮೈಸೂರು	41	89	60	149
8	ಬೀದರ್	1	0	1	1
9	ರಾಯಚೂರು	1	0	3	3
10	ಬೆಳಗಾಂ	15	2	1	3
11	ಗುಲ್ಬರ್ಗಾ	11	0	7	7
12	ಹುಬ್ಬಳ್ಳಿ	4	2	1	3
13	ತುಮಕೂರು	4	3	5	8
14	ಚಿತ್ರದುರ್ಗ	4	1	0	1
15	ಬಿಜಾಪುರ	6	0	2	2
16	ಬಳ್ಳಾರಿ	2	0	2	2
17	ಉತ್ತರ ಕನ್ನಡ	14	7	13	20
18	ಶಿವಮೊಗ್ಗ*	11	5	1	6
19	ಧಾರವಾಡ	6	0	2	2
20	ಚಿಕ್ಕಮಗಳೂರು	8	–	–	–
21	ಕೋಲಾರ	40	–	–	–
	ಒಟ್ಟು	**502**	**566**	**173**	**739**

ಅನುಬಂಧ–2

ವಿವಿಧ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಹಂಗಾಮಿ ನೌಕರರ ದರ್ಜೆ ಮತ್ತು ಕೆಲಸ ನಿರ್ವಹಿಸುತ್ತಿರುವ ಅವಧಿ

ಕ್ರ. ಸಂ.	ಜಿಲ್ಲಾ	ಹಂಗಾಮಿ ನೌಕರರ	ಹಂಗಾಮಿ ನೌಕರರ	ಕೆಲಸ ನಿರ್ವಹಿಸುತ್ತಿರುವ ಅವಧಿ
1	ಮಡಿಕೇರಿ	2	ಸಿ ದರ್ಜೆಯ ದಿನಗೂಲಿ ನೌಕರರು	10 ವರ್ಷಗಳಿಂದ
2	ಮಂಡ್ಯ	57	ಡಿ ದರ್ಜೆಯ ದಿನಗೂಲಿ ನೌಕರರು	10–15 ವರ್ಷಗಳಿಂದ
3	ದಕ್ಷಿಣ ಕನ್ನಡ	5	ದಿನಗೂಲಿ ನೌಕರರು	9 ವರ್ಷಗಳಿಂದ
4	ಹಾಸನ	9	ದಿನಗೂಲಿ ನೌಕರರು	16 ವರ್ಷಗಳಿಂದ
5	ಮೈಸೂರು	60	ಡಿ ದರ್ಜೆಯ ದಿನಗೂಲಿ ನೌಕರರು	16 ವರ್ಷಗಳಿಂದ
6	ಬೀದರ್	1	ಗುತ್ತಿಗೆ ಆಧಾರದ ಮೇಲೆ	5–6 ವರ್ಷಗಳಿಂದ
7	ರಾಯಚೂರು	3	ಡಿ ದರ್ಜೆಯ ದಿನಗೂಲಿ ನೌಕರರು	14 ವರ್ಷಗಳಿಂದ
8	ಬೆಳಗಾಂ	1	ಡಿ ದರ್ಜೆಯ ದಿನಗೂಲಿ ನೌಕರರು	4 ವರ್ಷಗಳಿಂದ
9	ಗುಲ್ಬರ್ಗಾ	7	ಸಿ ದರ್ಜೆಯ ದಿನಗೂಲಿ ನೌಕರರು ಡಿ ದರ್ಜೆಯ ದಿನಗೂಲಿ ನೌಕರರು	10 ವರ್ಷಗಳಿಂದ
10	ಹುಬ್ಬಳ್ಳಿ	1	ಡಿ ದರ್ಜೆಯ ದಿನಗೂಲಿ ನೌಕರರು	1 ವರ್ಷದಿಂದ
11	ತುಮಕೂರು	5	ಡಿ ದರ್ಜೆಯ ದಿನಗೂಲಿ ನೌಕರರು	12 ವರ್ಷಗಳಿಂದ
12	ಚಿತ್ರದುರ್ಗ	0	–	–
13	ಬಿಜಾಪುರ	2	ಸಿ ದರ್ಜೆಯ ದಿನಗೂಲಿ ನೌಕರರು–1 ಡಿ ದರ್ಜೆಯ ದಿನಗೂಲಿ ನೌಕರರು–1	1–5 ವರ್ಷಗಳಿಂದ 2–3 ವರ್ಷಗಳಿಂದ
14	ಬಳ್ಳಾರಿ	2	ಸಿ ದರ್ಜೆಯ ದಿನಗೂಲಿ ನೌಕರರು–1 ಡಿ ದರ್ಜೆಯ ದಿನಗೂಲಿ ನೌಕರರು–1	3 ವರ್ಷಗಳಿಂದ 2 ವರ್ಷಗಳಿಂದ
15	ಉತ್ತರ ಕನ್ನಡ	13	ಸಿ ದರ್ಜೆಯ ದಿನಗೂಲಿ ನೌಕರರು ಡಿ ದರ್ಜೆಯ ದಿನಗೂಲಿ ನೌಕರರು	6 ವರ್ಷಗಳಿಂದ 4 ವರ್ಷಗಳಿಂದ
16	ಶಿವಮೊಗ್ಗ*	1	ಡಿ ದರ್ಜೆಯ ದಿನಗೂಲಿ ನೌಕರರು	2–3 ವರ್ಷಗಳಿಂದ
17	ಧಾರವಾಡ	2	ಸಿ ದರ್ಜೆಯ ದಿನಗೂಲಿ ನೌಕರರು–1 ಡಿ ದರ್ಜೆಯ ದಿನಗೂಲಿ ನೌಕರರು–1	1 ವರ್ಷದಿಂದ 16 ವರ್ಷಗಳಿಂದ
18	ಬೆಂಗಳೂರು ಹಾಪ್‌ಕಾಮ್	2	ದಿನಗೂಲಿ ನೌಕರರು–2	8 ವರ್ಷಗಳಿಂದ
	ಒಟ್ಟು	**173**		

ಜಾರಿಗೊಳಿಸಲಾಗುತ್ತಿದೆ, ಎಂದಿನಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು ;

(ಆ) "ರಾಷ್ಟ್ರೀಯ ತೋಟಗಾರಿಕೆ ಮಿಷನ್" ಬಗ್ಗೆ ಸಂಕ್ಷಿಪ್ತ ವಿವರ ನೀಡುವುದು ?

ಶ್ರೀ ಶಶಿಕಾಂತ ಅ. ನಾಯಕ (ತೋಟಗಾರಿಕೆ ಸಚಿವರು) :–

(ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು ರಾಜ್ಯದ 17 ಜಿಲ್ಲೆಗಳಲ್ಲಿ ಎಂದರೆ, ಬೆಂಗಳೂರು (ಗ್ರಾಮಾಂತರ), ತುಮಕೂರು, ಮೈಸೂರು, ಕೋಲಾರ, ಚಿತ್ರದುರ್ಗ, ಬೆಳಗಾಂ, ಬಾಗಲುಕೋಟೆ, ಬಿಜಾಪುರ, ಕೊಡಗು, ಕೊಪ್ಪಳ, ಹಾಸನ, ಗುಲ್ಬರ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯನ್ನು 2005–06 ರಿಂದ ಜಾರಿಗೊಳಿಸಲಾಗಿದೆ.

(ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

"ರಾಷ್ಟ್ರೀಯ ತೋಟಗಾರಿಕೆ ಮಿಷನ್" ಬಗ್ಗೆ ಸಂಕ್ಷಿಪ್ತ ವಿವರ

ತೋಟಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ಹೊಸದಾಗಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು ಪ್ರಾರಂಭಿಸಿರುತ್ತದೆ. ಈ ಯೋಜನೆಯು 7 ವರ್ಷಗಳ ಕಾಲ ಅನುಷ್ಠಾನದಲ್ಲಿರುತ್ತದೆ. ಕೇಂದ್ರ ಸರ್ಕಾರದಿಂದ 2005–06 ಮತ್ತು 2006–07ನೇ ಸಾಲಿನಲ್ಲಿ 10ನೇ ಪಂಚವಾರ್ಷಿಕ ಯೋಜನೆಯಡಿ ಶೇ. 100ರಷ್ಟು ಅನುದಾನವು ದೊರೆಯುತ್ತದೆ ಹಾಗೂ 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರದ ಪಾಲು ಶೇ. 85ಕ್ಕೆ ನಿಗದಿಯಾಗಿದ್ದು, ಉಳಿದ ಶೇ. 15ರ ಭಾಗವನ್ನು ರಾಜ್ಯದಿಂದ ಒದಗಿಸಬೇಕಾಗಿರುತ್ತದೆ. ಮಿಷನ್ ಕಾರ್ಯಕ್ರಮಗಳನ್ನು ಆಯಾ ಪ್ರದೇಶದ ವೈವಿಧ್ಯಮಯ ಭೂಹವಾಗುಣಗಳಿಗೆ ಅನುಗುಣವಾಗಿ ಪ್ರದೇಶ ಆಧಾರಿತ ಕಾರ್ಯತಂತ್ರಗಳ ಮೂಲಕ ತೋಟಗಾರಿಕೆಯನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವುದು ಮತ್ತು ತೋಟಗಾರಿಕೆ ಉತ್ಪಾದನೆಯ ಹೆಚ್ಚಳ, ಪೌಷ್ಠಿಕತೆ ಸಂರಕ್ಷಣೆ ಹಾಗೂ ರೈತ ಸಮುದಾಯದ ಆದಾಯ ಹೆಚ್ಚಿಸುವ ಉದ್ದೇಶ ಹೊಂದಿರುತ್ತದೆ. ಕಾಂಪೋನೆಂಟ್‌ಗಳು ಇಂತಿವೆ :

- ☐ ಈ ಯೋಜನೆಯಡಿ ಆಯ್ದ ಹಣ್ಣು, ಹೂವು, ತೋಟದ ಬೆಳೆ, ಸಾಂಬಾರು ಹಾಗೂ ಇನ್ನಿತರ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ.
- ☐ ಮಳೆನೀರು ಕೊಯ್ಲು ಹಾಗೂ ಸಂಗ್ರಹಣೆ ಮತ್ತು ಜಲಾಭಿವೃದ್ಧಿಗೋಸ್ಕರ ಕೃಷಿಹೊಂಡಗಳು, ಸಮುದಾಯ ಕೆರೆಗಳ ನಿರ್ಮಾಣಕ್ಕೆ ಸಹಾಯಧನ.
- ☐ ಪ್ರದೇಶ ವಿಸ್ತರಣೆಗೆ ಬೇಕಾಗುವ ಕಸಿ/ಸಸಿ/ಬೀಜ ಉತ್ಪಾದನೆಗೆ ನರ್ಸರಿಗಳ ಸ್ಥಾಪನೆ ಮತ್ತು ಅಭಿವೃದ್ಧಿ.
- ☐ ವಾಣಿಜ್ಯ ಹೂ ಬೆಳೆಗಳ ರಕ್ಷಿತ ಬೇಸಾಯಕ್ಕೆ ಹಸಿರುಮನೆ ಹಾಗೂ

ಶೇಡ್‌ನೆಟ್‌ಗಳಿಗೆ ಪ್ರೋತ್ಸಾಹ.

- ☐ ಬೆಳೆದ ಬೆಳೆಯು ಮಾರುಕಟ್ಟೆಗೆ ಸಾಗಿಸುವ ಮುಂಚಿತವಾಗಿ ಹಾಳಾಗದಂತೆ ನೋಡಿಕೊಳ್ಳುವುದಕ್ಕಾಗಿ ಕೊಯ್ಲು ಕೇಂದ್ರಗಳ ಸ್ಥಾಪನೆ ಹಾಗೂ ಒಣಗಿಸುವ ಮತ್ತು ಸಂರಕ್ಷಣಾ ಘಟಕಗಳ ನಿರ್ಮಾಣ.
- ☐ ಸಗಟು ಮತ್ತು ಗ್ರಾಮಾಂತರ ಮಾರುಕಟ್ಟೆಗಳ ನಿರ್ಮಾಣ, ಅಭಿವೃದ್ಧಿ ಮತ್ತು ಪುನಶ್ಚೇತನ ಕಾರ್ಯಕ್ರಮಕ್ಕೆ ಸಹಾಯಧನ.
- ☐ ಸುರಕ್ಷಿತ ಸಾಗಾಣಿಕೆಗೆ Refrigerated Van ಖರೀದಿ, ಶೈತ್ಯಾಗಾರ ಘಟಕ, ಶೀಥಲ ಗೃಹಗಳ ಸ್ಥಾಪನೆಗೆ ಸಹಾಯಧನ.
- ☐ ಸಣ್ಣ ಮತ್ತು ದೊಡ್ಡ ಪ್ರಮಾಣದ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.
- ☐ ಸಾವಯುವ ತೋಟಗಾರಿಕೆ, ಎರೆಹುಳು ಗೊಬ್ಬರ, ಜೈವಿಕಗೊಬ್ಬರ ಮತ್ತು ಜೈವಿಕ ನಿಯಂತ್ರಕಗಳ ಉತ್ಪಾದನಾ ಘಟಕಗಳ ಅಭಿವೈದ್ಧಿ, ಸಮಗ್ರ ಕೀಟ ಹಾಗೂ ಪೋಷಕಾಂಶ ನಿರ್ವಹಣೆ ಇತ್ಯಾದಿ.

ಈ ಯೋಜನೆಗೆ 2005–06 ನೇ ಸಾಲಿನ ಕಾರ್ಯಕ್ರಮಗಳಿಗೆ ಒಟ್ಟು 44.55 ಕೋಟಿ ರೂ.ಗಳು ಬಿಡುಗಡೆಯಾಗಿದ್ದು, ಮೇ 2007ರ ಅಂತ್ಯಕ್ಕೆ ರೂ. 41.97 ಕೋಟಿ ರೂ.ಗಳ ಖರ್ಚು ಭರಿಸಲಾಗಿದೆ.

ಈ ಯೋಜನೆಗೆ 2006–07 ನೇ ಸಾಲಿನ ಕಾರ್ಯಕ್ರಮಗಳಿಗೆ ಒಟ್ಟು 89.40 ಕೋಟಿ ರೂ.ಗಳು ಬಿಡುಗಡೆಯಾಗಿದ್ದು, ಮೇ 2007ರ ಅಂತ್ಯಕ್ಕೆ ರೂ. 29.54 ಕೋಟಿ ರೂ.ಗಳ ಖರ್ಚು ಭರಿಸಲಾಗಿದೆ.

756 (1221) ಶ್ರೀ ಶಿವರಾಮು ಬಿ. (ಗಂಡಸಿ) :–ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯಕ್ಕೆ ವಿದರ್ಭ ಯೋಜನೆ (ಪ್ರಧಾನಿ ಪ್ಯಾಕೇಜ್) ಯಾವಾಗ ಮಂಜೂರಾತಿ ಮಾಡಲಾಯಿತು ; ಇದಕ್ಕಾಗಿ ಮಂಜೂರಾದ ಒಟ್ಟು ಮೊತ್ತವೆಷ್ಟು (ಇಲಾಖಾವಾರು ಬಿಡುಗಡೆಯಾದ ಹಣದ ಮಾಹಿತಿ ನೀಡುವುದು) ;

(ಆ) ಯೋಜನೆಯ ಪೂರ್ಣ ಕ್ರಿಯಾ ಯೋಜನೆ ಮಂಜೂರಾತಿ ಪಡೆದಿದೆಯೇ (ಯೋಜನೆಗಳ ಇಲಾಖಾವಾರು ಹಂತದ ಮಾಹಿತಿ ನೀಡುವುದು) ;

(ಇ) ರೈತರ ಆತ್ಮಹತ್ಯೆಯನ್ನು ತಡೆಗಟ್ಟಲು ಮಂಜೂರಾಗಿರುವ ಯೋಜನೆಗಳಾವುವು ;

(ಈ) ಯೋಜನೆ ಮಂಜೂರಾದ 6 ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) :–

(ಅ) ಅಕ್ಟೋಬರ್ 2006ರಲ್ಲಿ ಮಂಜೂರಾಗಿದೆ. ಇದಕ್ಕಾಗಿ ಇಲಾಖಾವಾರು ಮಂಜೂರಾದ ಹಾಗೂ ಈವರೆಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು